15)	ಸಮಗ್ರ ಗ್ರಾಮೀಣ ಇಂಧನಶಕ್ತಿ ಕಾರ್ಯಕ್ರಮ	9.500	0.851
16)	ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ	4.870	3.060
17)	ಜಿಲ್ಲಾಪಂಚಾಯತಿಗೆ ಅನುದಾನ	40.600	40.600
18)	ಗ್ರಾಮಪಂಚಾಯ್ತಿಗೆ ಅನುದಾನ	414.375	414.375
19)	ಗ್ರಾಮೀಣ ನೀರು ಸರಬರಾಜು	575.930	482.504

ವಿದ್ಯುತ್ ಕಳವು ಪ್ರಕರಣಗಳ ಬಗ್ಗೆ.

659 - ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಕಳವು ಪ್ರಕರಣಗಳ ಪತ್ತೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು.

ಆ) ಕೈಗೊಂಡಿದ್ದರೆ 1996 ಜನವರ ವರೆಗೆ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ.

ಇ) ಇದರಿಂದ ಸರ್ಕಾರಕ್ಕೆ ಬಂದ ಹಣವೆಷ್ಟು?

ಈ) ಅಪರಾಧಿಗಳ ಮೇಲೆ ಕೈಗೊಂಡ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಮಂಡಳಿಯಲ್ಲಿ ಟೆಕ್ನಿಕಲ್ ಆಡಿಟ್ ಸೆಲ್ ಮತ್ತು ಜಾಗೃತ ದಳಗಳು ವಿದ್ಯುತ ಕಳ್ಳತನವನ್ನು ಪತೆಹಚ್ಚುವ ಕಾರ್ಯದಲ್ಲಿ ನಿರತಗೊಂಡಿದೆ. ಟೆಕ್ನಿಕಲ್ ಆಡಿಟ್ ಸೆಲ್ ಮುಖ್ಯ ಇಂಜಿನಿಯರ್ ರವರ ನೇತೃತ್ವದಲ್ಲಿ ಮತ್ತು ಜಾಗೃತದಳವು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರ ನೇತೃತ್ವದಲ್ಲಿ ಕೆಲಸ ಮಾಡುತ್ತಿವೆ.

ಜಾಗೃತ ದಳ ಮತ್ತು ಟೆಕ್ನಿಕಲ್ ಆಡಿಟ್‌ಸೆಲ್‌ಗಳ ಸಿಬ್ಬಂದಿಗಳು ಅನಿರೀಕ್ಷಿತ ದಾಳಿಗಳ ಮೂಲಕ ವಿದ್ಯುತ್ ಕಳ್ಳತನವನ್ನು ಪತ್ತೆಹಚ್ಚುತ್ತಿದೆ. ಎಲ್ಲಾ ಹೆಚ್.ಟಿ. ಸ್ಥಾವರಗಳ ವಿದ್ಯುತ್ ಬಳಕೆಯನ್ನು ಕಂಪ್ಯೂಟರ್‌ಗಳ ಮೂಲಕ ಅಭ್ಯಸಿಸಿ ಈ ರೀತಿ ಪಡೆದ ಮಾಹಿತಿಯನ್ನು ಜಾಗೃತದಳ ಮತ್ತು ಟೆಕ್ನಿಕಲ್ ಆಡಿಟ್ ಸೆಲ್‌ಗಳಿಗೆ ಒದಗಿಸಲಾಗುತ್ತಿದೆ. ಇದರಿಂದ ವಿದ್ಯುತ್ ಕಳ್ಳತನವನ್ನು ಪತ್ತೆ ಹಚ್ಚುವಲ್ಲಿ ಅನುಕೂಲವಾಗುತ್ತದೆ. ಲೆಡ್ಜರ್ ಪುಸ್ತಕಗಳನ್ನು ಪರಿಶೀಲಿಸಿ ಅವುಗಳ ಆಧಾರದ ಮೇಲೆ ಎಲ್.ಟಿ. ಸ್ಥಾವರಗಳ ಕಳ್ಳತನವನ್ನು ಪತ್ತೆ ಹಚ್ಚಲಾಗುತ್ತದೆ

ಆ) 1995-96ನೇ ಸಾಲಿನಲ್ಲಿ ಜನವರಿ 96ರ ವರೆಗೆ ಒಟ್ಟು 142 ಅಪರಾಧಾರ್ಹ (ಕಾಗ್ನಿಸಬಲ್) ಮತ್ತು 3216 ಅಪರಾಧಾರ್ಹವಲ್ಲದ (ನಾನ್‌ಕಾಗ್ನಿಸಬಲ್) ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಇ) ಜನವರಿ 96ರ ಅಂತ್ಯದವರೆಗೆ ಅಪರಾಧರ್ಹ ಪ್ರಕರಣಗಳಲ್ಲಿ ವಸೂಲಾದ ಹಣದ ಮೊತ್ತ ರೂ. 23.50 ಲಕ್ಷ ರೂ.ಗಳು ಮತ್ತು ಅಪರಾಧಾರ್ಹವಲ್ಲದ ಪ್ರಕರಣಗಳಲ್ಲಿ ವಸೂಲಾದ ಹಣದ ಮೊತ್ತ ರೂ. 170.96 ಲಕ್ಷಗಳು.

ಈ) ಅಪರಾಧರ್ಹ ಪ್ರಕರಣಗಳಲ್ಲಿ (ಕಾಗ್ನಿಸಬಲ್) ಮಂಡಳಿಯು ಸಂಬಂಧಪಟ್ಟ ಪೋಲೀಸ್ ಠಾಣೆಗಳಲ್ಲಿ ದೂರುಗಳನ್ನು ದಾಖಲೆ ಮಾಡಿದ್ದು ಪೋಲೀಸ್ ಇಲಾಖೆಯು ಅಪಾದಿತರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲು ಕ್ರಮ ಕೈಗೊಳ್ಳುತ್ತದೆ.